# MAYA CARE FOUNDATION

## ವರದಿ ಪತ್ರಿಕೆ

Year: 2nd Issue: 3rd
ಏಪ್ರಿಲ್ – ಜೂನ್ 2026

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

# ಕಾಳಜಿ, ಕರುಣೆ ಮತ್ತು ಸಮಾನ ಅವಕಾಶಗಳ ಸಬಲೀಕರಣ

## <u>ಸಂಪಾದಕೀಯ</u>

ಮಾರ್ಚ್ 8ರಂದು ಆಚರಿಸಲಾದ ಅಂತರರಾಷ್ಟ್ರೀಯ ಮಹಿಳಾ ದಿನವು ನಮ್ಮ ಸಮಾಜದಲ್ಲಿ ಮಹಿಳೆಯರ ಅಪಾರ ಮಹತ್ವವನ್ನು ಮತ್ತೊಮ್ಮೆ ನೆನಪಿಸುತ್ತದೆ. ಕುಟುಂಬದ ಆಧಾರಸ್ತಂಭವಾಗಿಯೂ, ದೇಶದ ಅಭಿವೃದ್ಧಿಗೆ ಪ್ರೇರಣೆಯಾಗಿಯೂ ಮಹಿಳೆಯರು ಅವಿಭಾಜ್ಯ ಅಂಗರಾಗಿದ್ದಾರೆ. ತಾಯಿಯಾಗಿ, ಸಹೋದರಿಯಾಗಿ, ನಾಯಕಿಯಾಗಿ ಹಾಗೂ ಉದ್ಯೋಗಿಯಾಗಿ ಅವರು ನಿಭಾಯಿಸುವ ಬಹುಮುಖ ಪಾತ್ರಗಳು ಸಮಾಜವನ್ನು ಸದೃಢಗೊಳಿಸುತ್ತವೆ. ಅವರ ಶಕ್ತಿ, ತ್ಯಾಗ ಮತ್ತು ದೃಢನಿಶ್ಚಯವು ನಮ್ಮ ಬದುಕಿಗೆ ದಿಕ್ಕು ತೋರಿಸುತ್ತವೆ.

ವಿಶೇಷವಾಗಿ, ಅಂಗವಿಕಲ ಮಹಿಳೆಯರ ಸಬಲೀಕರಣವು ಸಮಾನತೆಯ ಸಮಾಜ ನಿರ್ಮಾಣಕ್ಕೆ ಅತ್ಯಗತ್ಯವಾಗಿದೆ. ಈ ದಿಕ್ಕಿನಲ್ಲಿ ಮಾಯಾ ಕೇರ್ ಫೌಂಡೇಶನ್ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಿದೆ. ಇಲ್ಲಿ ಮಹಿಳೆಯರಿಗೆ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶ ಸಿಗುತ್ತದೆ. ಇದರಿಂದ ಅವರು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವುದರ ಜೊತೆಗೆ, ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳುತ್ತಾರೆ. ಇತರರಿಗೆ ಸಹಾಯ ಮಾಡುವ ಮೂಲಕ ತಮ್ಮ ಜೀವನಕ್ಕೂ ಹೊಸ ಅರ್ಥ ನೀಡಿಕೊಳ್ಳುವುದು—ಇದೇ ನಿಜವಾದ ಸಬಲೀಕರಣದ ಸಾರವಾಗಿದೆ.

ಇನ್ನೊಂದೆಡೆ, ಜಾಗತಿಕ ಮಟ್ಟದಲ್ಲಿ ಅಮೆರಿಕಾ–ಇಸ್ರೇಲ್–ಇರಾನ್ ನಡುವಿನ ಉದ್ವಿಗ್ನತೆ ವಿಶ್ವಶಾಂತಿಗೆ ಧಕ್ಕೆ ತರುತ್ತಿದೆ. ಯುದ್ಧ ಯಾವತ್ತಿಗೂ ಶಾಶ್ವತ ಪರಿಹಾರವಲ್ಲ; ಅದು ನಿರಪರಾಧಿಗಳ ಜೀವನವನ್ನು ಹಾಳುಮಾಡುತ್ತದೆ. ಆದ್ದರಿಂದ, ಶಾಂತಿಪ್ರಿಯ ಜನರೆಲ್ಲರೂ ಈ ಸಂಘರ್ಷಗಳು ಶೀಘ್ರದಲ್ಲೇ ಅಂತ್ಯಗೊಂಡು ಶಾಂತಿ ಸ್ಥಾಪನೆಯಾಗಲೆಂದು ಆಶಿಸುತ್ತಿದ್ದಾರೆ.

ಹಿರಿಯ ನಾಗರಿಕರ ಆರೋಗ್ಯ ಭದ್ರತೆಯ ದೃಷ್ಟಿಯಿಂದ "ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (PM-JAY)" ಒಂದು ಮಹತ್ವದ ಯೋಜನೆಯಾಗಿದೆ. ಇದರಡಿ ವರ್ಷಕ್ಕೆ ರೂ.5 ಲಕ್ಷದವರೆಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಬಹುದು. ಈ ಯೋಜನೆಯ ಪ್ರಯೋಜನವನ್ನು ಹೆಚ್ಚು ಮಂದಿ ಪಡೆಯುವುದು ಅಗತ್ಯ. ಇದರ ಬಗ್ಗೆ ಯಾವುದೇ ಮಾಹಿತಿ ಅಥವಾ ಸಹಾಯ ಬೇಕಾದಲ್ಲಿ ಮಾಯಾ ಕೇರ್ ಫೌಂಡೇಶನ್ ಸಂಪರ್ಕಿಸುವ ಮೂಲಕ ನೆರವು ಪಡೆಯಬಹುದು.

ಇದಲ್ಲದೆ, ಮಾಯಾ ಕೇರ್ ಫೌಂಡೇಶನ್ "ಪ್ರಾಜೆಕ್ಟ್ ಬಿಂದು" ಮೂಲಕ "ಯಶಸ್ವಿ ವ್ಯವಹಾರ ಮಾದರಿ" ವಿಭಾಗದಲ್ಲಿ ಆಲ್ ಇಂಡಿಯಾ ಅಸೋಸಿಯೇಶನ್ ಕೇಸ್ ಸ್ಟಡಿ ಪ್ರಶಸ್ತಿಯನ್ನು ಗೆದ್ದು ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಈ ಕೇಸ್ ಸ್ಟಡಿಯನ್ನು ಸವಿತಾ, ಜೀಬಾ ಮತ್ತು ಅನಮೆರಿ ಅವರು ಮಂಡಿಸಿದ್ದು, ಮಾಧುರಿ, ಸುನಿತಾ ಎಂ, ಜ್ಯೋತಿ ಮತ್ತು ಅಭಿಜಿತ್ ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿದೆ. ಸೌಮ್ಯ ಮತ್ತು ಪಲ್ಲವಿ ಅವರ ಬೆಂಬಲವೂ ಈ ಸಾಧನೆಗೆ ಬಲವಾಗಿದೆ. ಈ ಪ್ರಶಸ್ತಿಯನ್ನು ಆಯುಷ್ ಮತ್ತು ಆಶಾ ಸ್ವೀಕರಿಸಿದ್ದಾರೆ.

# ಫಲಾನುಭವಿಗಳಿಂದ ಪ್ರತಿಕ್ರಿಯೆ

**ಲಕ್ಷ್ಮಿ ಅಮಲ್ , 70, ಕೊಯಂಬತ್ತೂರು +91942825932**



ನಾನು ಲಕ್ಷ್ಮಿ ಅಮಲ್. ನಿಮ್ಮ ಸ್ವಯಂಸೇವಕಿ ಸಂಧ್ಯಾ ಅವರು ಔಷಧಿಗಳನ್ನು ತಂದುಕೊಟ್ಟಕ್ಕಾಗಿ ತುಂಬಾ ಧನ್ಯವಾದಗಳು. ವಯೋವೃದ್ಧಳಾದ್ದರಿಂದ ಹೊರಗೆ ಹೋಗಲು ಸಾಧ್ಯವಿಲ್ಲ; ನಿಮ್ಮ ಸಹಾಯ ನನಗೆ ಬಹಳ ಉಪಕಾರವಾಗಿದೆ.ಮಾಯಾ ಕೇರ್ ಮತ್ತು ಸಂಧ್ಯಾ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

**ನಾಗರತ್ನ, 65, ಬೆಂಗಳೂರು**



ನಾನು ಶ್ರೀಮತಿ ನಾಗರತ್ನ, 65, ಬೆಂಗಳೂರು. ಮಾಯಾ ಕೇರ್ ಫೌಂಡೇಶನ್‌ಗೆ ಹೃತ್ಪೂರ್ವಕ ಧನ್ಯವಾದಗಳು. ಸ್ವಯಂಸೇವಕಿ ಶ್ರೀಮತಿ ಆಶಾ ಅವರು ಆಸ್ಪತ್ರೆ ಭೇಟಿ, ಸಂಗಡಿತನ ಮತ್ತು ದಾಖಲೆ ಕೆಲಸಗಳಲ್ಲಿ ನೀಡಿದ ಸಹಾಯದಿಂದ ನನಗೆ ತುಂಬಾ ನೆಮ್ಮದಿ ಮತ್ತು ಸಂತೋಷವಾಗಿದೆ.

## ಬೆಂಗಳೂರು ವೃದ್ಧಾಶ್ರಮಗಳ ಪಟ್ಟಿ

| ಕ್ರಮ ಸಂಖ್ಯೆ | ವೃದ್ಧಾಶ್ರಮದ ಹೆಸರು | ವಿಳಾಸ | ಸಂಪರ್ಕ ಸಂಖ್ಯೆ | ಸೇವೆಯ ಪ್ರಕಾರ |
|---|---|---|---|---|
| 1 | ಫಾರ್ಚ್ಯೂನ್ ವೃದ್ಧಾಶ್ರಮ | ಜಯನಗರ 9ನೇ ಬ್ಲಾಕ್, ಬೆಂಗಳೂರು | 98442 11811 | ವೃದ್ಧಾಶ್ರಮ + ಪ್ಯಾಲಿಯೇಟಿವ್ ಕೇರ್ |
| 2 | ನೈಟಿಂಗೇಲ್ಸ್ ಟ್ರಸ್ಟ್ ಡೇ ಕೇರ್ ಸೆಂಟರ್ | ಜಯನಗರ, ಬೆಂಗಳೂರು | 80424 26565 | ಡೇ ಕೇರ್ + ಡಿಮೆನ್ಷಿಯಾ ಕೇರ್ |
| 3 | ನೈಟಿಂಗೇಲ್ಸ್ ಟ್ರಸ್ಟ್ ಆರ್‌ಟಿ ನಗರ | ಆರ್‌ಟಿ ನಗರ, ಬೆಂಗಳೂರು | 80424 26565 | ಡೇ ಕೇರ್ + ಡಿಮೆನ್ಷಿಯಾ ಕೇರ್ |
| 4 | ಬೆಂಗಳೂರು ಕೇರ್ ಟೇಕರ್ಸ್ | ಕೊತ್ತನೂರು, ಬೆಂಗಳೂರು | 77605 06666 | ವೃದ್ಧಾಶ್ರಮ + ವೈದ್ಯಕೀಯ + ಪ್ಯಾಲಿಯೇಟಿವ್ ಕೇರ್ |
| 5 | ಎಲ್ಡರ್‌ಎಯ್ಡ್ ವೆಲ್‌ನೆಸ್ ಪ್ರೈವೇಟ್ ಲಿಮಿಟೆಡ್ | ಕಸ್ತೂರಿ ನಗರ, ಬೆಂಗಳೂರು | 81234 00400 | ಡೇ ಕೇರ್ + ಮನೆ ಆಧಾರಿತ ಹಿರಿಯರ ಸೇವೆ |
| 6 | ಆಶಾ ಕಿರಣ ವೃದ್ಧಾಶ್ರಮ | ಅಂಜನಾಪುರ, ಬೆಂಗಳೂರು | 97311 54604 | ಆರೋಗ್ಯವಂತ ಹಿರಿಯರ ಆರೈಕೆ |
| 7 | ಸ್ಪಂದನ ವೃದ್ಧಾಶ್ರಮ | ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು | 97408 32261 | ವೃದ್ಧಾಶ್ರಮ + ಹಾಸಿಗೆಯಲ್ಲಿರುವವರ ಆರೈಕೆ |
| 8 | ಆಶಾ ಭವನ – ನಿರಾಶ್ರಿತ ವೃದ್ಧಾಶ್ರಮ | 12, ಚಿಕ್ಕಬೆಳ್ಳಂದೂರು, ಸರ್ಜಾಪುರ ಮುಖ್ಯ ರಸ್ತೆ | 8105909896 | ವೃದ್ಧಾಶ್ರಮ |
| 9 | ಪ್ರೊವಿಡೆನ್ಸ್ ಹೋಮ್ | ಸರ್ಜಾಪುರ–ಮಾರತಹಳ್ಳಿ ರಸ್ತೆ,ಕಾರ್ಮೆಲಾರ 560035 | 8747977228 | ವೃದ್ಧಾಶ್ರಮ |
| 10 | ಆನಂದ ವಿಹಾರ ಸೀನಿಯರ್ಸ್ ಹೋಮ್ | ಬನ್ನೇರ್ಗಟ್ಟ ರಸ್ತೆ / ಬೆಗೂರ್ | 81234 27666 | ವೃದ್ಧಾಶ್ರಮ + ಪ್ಯಾಲಿಯೇಟಿವ್ ಕೇರ್ |

# <u>ನಮ್ಮ ಸ್ವಯಂಸೇವಕರನ್ನು ಸಂಭ್ರಮಿಸುತ್ತೇವೆ</u>

ಬೆಂಗಳೂರು ನಿವಾಸಿ ಸೆಲ್ವರಾಜ್ ಅವರು ಕಳೆದ 4 ವರ್ಷಗಳಿಂದ ಮಾಯಾ ಕೇರ್ ಫೌಂಡೇಶನ್‌ನೊಂದಿಗೆ ಸಮರ್ಪಿತವಾಗಿ ಸೇವೆ ಸಲ್ಲಿಸುತ್ತಿರುವುದಕ್ಕಾಗಿ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಅವರ ನಿಷ್ಠೆ ಮತ್ತು ಕರುಣೆ ಅನೇಕರ ಜೀವನದಲ್ಲಿ ಮಹತ್ವದ ಬದಲಾವಣೆಯನ್ನು ತಂದಿದೆ. ವೈಯಕ್ತಿಕ ಭೇಟಿ, ಆಸ್ಪತ್ರೆ ಸಹಾಯ ಮತ್ತು ಬ್ಯಾಂಕ್ ಸಂಬಂಧಿತ ಕೆಲಸಗಳಲ್ಲಿ ಅವರು ಸದಾ ಉತ್ತಮ ಸೇವೆ ನೀಡಿದ್ದಾರೆ. ಅವರ ಕಾಳಜಿ ಮತ್ತು ಸೇವಾಭಾವವು ಮಾಯಾ ಕೇರ್‌ನ ನಿಜವಾದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ.




ಸೆಲ್ವರಾಜ್ ಅವರಿಗೆ ಅವರ ಅಮೂಲ್ಯ ಕೊಡುಗೆ ಮತ್ತು ನಿರಂತರ ಸಮರ್ಪಣೆಗೆ ಧನ್ಯವಾದಗಳು.




ಮಾಯಾ ಕೇರ್ ಫೌಂಡೇಶನ್ "Successful Business Model" ವಿಭಾಗದಲ್ಲಿ ಆಲ್ ಇಂಡಿಯಾ ಅಸೋಸಿಯೇಷನ್ ಕೇಸ್ ಸ್ಟಡಿ(AIMA) ಪ್ರಶಸ್ತಿಯನ್ನು ಗೆದ್ದಿದೆ.



ಜಾಯ್ ಫೌಂಡೇಶನ್, ಹೈದರಾಬಾದ್‌ನಲ್ಲಿ ಸ್ವಯಂಸೇವಕಿ ಅನುರಾಧಾ ಹೋಳಿ ಹಬ್ಬವನ್ನು ಆಚರಿಸಿದರು.



ಎಸ್‌ವಿಪಿ ವಾರ್ಷಿಕ ಕಾರ್ಯಕ್ರಮವನ್ನು ಆಯೋಜಿಸಿತು, ಇದರಲ್ಲಿ ಅನೇಕ ಎನ್‌ಜಿಒಗಳು ಭಾಗವಹಿಸಿ, ಎಸ್‌ವಿಪಿಯೊಂದಿಗೆ ತಮ್ಮ ಸಹಕಾರದ ಕಾರ್ಯಗಳ ಬಗ್ಗೆ ಪ್ರಸ್ತುತಪಡಿಸಿದರು




ಬಿಂದು ತಂಡದ ಸದಸ್ಯರು ಪುಣೆಯಲ್ಲಿ ನಡೆದ ಮ್ಯಾರಥಾನ್ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

Year: 2nd Issue: 3rd
ಏಪ್ರಿಲ್ – ಜೂನ್ 2026

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| ಮಾಯಾ ಕೇರ್ ಭಾರತದ 72 ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | FOR WHATSAPP |
|---|---|
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | 9552510400/9552510411<br>8055995966 |

**ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ**

1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| Website - www.mayacare.org | Email : service@mayacare.org |
|---|---|

Merchant Name : MAYA CARE FOUNDATION
Mobile Number : 7721053535

Deduction under I-Tax Act is Available

NAME OF THE A/C - MAYA CARE FOUNDATION
NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**UPI ID: mayacarefoundation@icici**

**Book-Post**

| **FROM:** | **TO:** |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>______________________<br>______________________<br>______________________ |